**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.</u>**

**<u>ಕ್ರಿಮಿನಲ್ ಮೊ.ಸಂ. 73/2016.</u>**

**ಪ್ರಾ. ಸಾ. ಃ-7**

**ಚಾ. ಸಾ. ಃ-12**

**ಹೆಸರು** ಃ- ಬುರಾನುದ್ದೀನ್
**ತಂದೆಯ ಹೆಸರು** ಃ- ಇಕ್ಬಾಲ್ ಷಾ
**ವಯಸ್ಸು** ಃ- **37 ವರ್ಷ**
**ಉದ್ಯೋಗ** ಃ- ವಲಯ ಅರಣ್ಯಾಧಿಕಾರಿ
**ವಾಸಸ್ಥಳ** ಃ- ಸುರಪುರ

---

**ಪ್ರಮಾಣೀಕರಿಸಲಾದ ದಿನಾಂಕ :-20.11.2023.**

**ಮುಖ್ಯ ವಿಚಾರಣೆ :- ಮಾನ್ಯ ಸ. ಸ. ಅ. ರವರಿಂದ ಃ-**

ನಾನು 2010 ರಿಂದ 2016 ರ ಡಿಸೆಂಬರ್ ಅವಧಿಯಲ್ಲಿ ಪೊನ್ನಂಪೇಟೆ ವಲಯದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಶ್ರೀಮಂಗಲ ಪೊಲೀಸ್ ಠಾಣೆಯವರು ನನಗೆ ಒಂದು ಮನವಿ ನೀಡಿ ಬೀಟೆ ಮರದ ಗುತ್ತಿಗಳನ್ನು ಗುರುತಿಸಿ ಧೃಡೀಕರಣ ಪತ್ರ ನೀಡುವಂತೆ ಕೋರಿರುತ್ತಾರೆ. ಅದರಂತೆ ನಾನು ಗುರುತಿಸಿ ವರದಿ ನೀಡಿರುತ್ತೇನೆ. ಧೃಡೀಕರಣ ಪತ್ರವನ್ನು ನಿಪಿ 13 ಎಂದು, ಸಾಕ್ಷಿ ಸಹಿಯನ್ನು ನಿಪಿ 13 ಎ ಎಂದು, ವರದಿಯನ್ನು ನಿಪಿ 14 ಎಂದು, ಸಾಕ್ಷಿ ಸಹಿಯನ್ನು ನಿಪಿ 14 ಎ ಎಂದು ಗುರುತಿಸಲಾಯಿತು. ನಮ್ಮ ಸಿಬ್ಬಂದಿ ಪಿ ಎಸ್ ಹಂಜಾದ್ ರವರು ಸ್ಥಳಕ್ಕೆ ಹೋಗಿ ಮರದ ಬುಡವನ್ನು ಪರಿಶೀಲಿಸಿ ನಕಲು ಹಾಳೆಯನ್ನು ಮರದ ಬುಡದ ಮೇಲೆ ಇಟ್ಟು ನಕಲು ಮಾಡಿಕೊಂಡು ಬಂದಿರುತ್ತಾರೆ. ಆನಂತರ ಪರಿಶೀಲಿಸಿ ಸದರಿ ಮರದ ಬುಡ ಯಾವ ಜಾತಿಯ ಮರಕ್ಕೆ ಸೇರಿದ್ದು ಎಂಬ ಬಗ್ಗೆ ನಿಗದಿ ಮಾಡಲಾಗಿರುತ್ತದೆ. ನಮ್ಮ ಸಿಬ್ಬಂದಿ ನೀಡಿದ ವರದಿ ಆಧಾರದ ಮೇಲೆ ನಾನು ಧೃಡೀಕರಣ ಪತ್ರ ನೀಡಿರುತ್ತೇನೆ..

**<u>ಪಾಟೀ ಸವಾಲು</u>** :- ಆರೋಪಿತರ ಪರ ವಕೀಲರಿಂದ

ಯಾವ ಸಂಖ್ಯೆಯ ಮರದ ನಾಟಾವನ್ನು ಯಾವ ಕುತ್ತಿಗೆ ಹೋಲಿಕೆ ಮಾಡಿ ವರದಿ ನೀಡಲಾಯಿತು ಎಂದು ನನ್ನ ವರದಿ ಸಲ್ಲಿಸಿಲ್ಲ ಎಂದರೆ ಸರಿ. ನಾವು ಹೋಲಿಕೆ ಮಾಡಿದ ಮರದ ಕುತ್ತಿ ಈ ಪ್ರಕರಣಕ್ಕೆ ಸಂಬಂಧಿಸಿದೆಯೊ ಇಲ್ಲವೊ ನನಗೆ ಗೊತ್ತಿಲ್ಲ ಎಂದರೆ ನಮ್ಮ ಸಿಬ್ಬಂದಿ ಸ್ಥಳಕ್ಕೆ ಹೋದಾಗ **ML PSI 1** ಮತ್ತು **ML PSI 2** ಎಂದು ಕುತ್ತಿಯ ಮೇಲೆ ನಮೂದಾಗಿತ್ತು ನನಗೆ ವರದಿ ಮಾಡಿರುತ್ತಾರೆ. ನನ್ನ ವರದಿಯಲ್ಲಿ **ML PSI 1** ಮತ್ತು **ML PSI 2** ಅನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದ ಕಾರಣ ಈ ಪ್ರಕರಣಕ್ಕೆ ಸಂಬಂಧಿಸಿದ ಸ್ಥಳದಲ್ಲಿ ಮರದ ಕುತ್ತಿಯನ್ನು ಹೋಲಿಕೆ ಮಾಡಲಾಯಿತೋ ಇಲ್ಲವೊ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ನೀಡಿರುವ ವರದಿ ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚುಕರಿಸಿ ಅಚ್ಚುಪ್ರತಿಯನ್ನು ತೆಗೆಯಲಾಗಿರುತ್ತದೆ)**

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

sd/-
**ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಪೊನ್ನಂಪೇಟೆ.**

**(ಸಾಕ್ಷಿಯ ಸಹಿ)**